# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

## ಕಚೇರಿ ಆದೇಶ

ವಿಷಯ : ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯುಕ್ತ ಅಧ್ಯಯನ ಮಂಡಳಿ ಸಭೆಯನ್ನು ನಡೆಸಿರುವ ಬಗ್ಗೆ.

ಉಲ್ಲೇಖ : 1. ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯುಕ್ತ ಕೋರ್ಸ್‌ನ ಶೈಕ್ಷಣಿಕ ಚಟುವಟಿಕೆಯ ನಿರ್ವಹಣೆಗಾಗಿ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿರುವ ಅಧಿಸೂಚನೆ ದಿನಾಂಕ: 08-02-2022.

2. ಸಂಖ್ಯೆ: ಕರಾಮುವಿ/ಡೀನ್ (ಶೈ)/ಡಿಎಸಿ-05/2018-19, ದಿ.: 22-02-2019

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09-01-2023

*****

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯುಕ್ತ ಅಧ್ಯಯನ ಮಂಡಳಿಯ ಉಲ್ಲೇಖ (1)ರ ಅಧಿಸೂಚನೆಯಂತೆ ರಚಿತವಾಗಿದ್ದು, ದಿನಾಂಕ: 05-01-2023 ರಂದು ಅಧ್ಯಯನ ಮಂಡಳಿಯ ಸಭೆಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಿದ್ದು, ಈ ಸಂಬಂಧ ಮಾನ್ಯ ಕುಲಪತಿಗಳು ಉಲ್ಲೇಖ (3) ರಲ್ಲಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಘಟನೋತ್ತರ ಮಂಜೂರಾತಿ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)/ಡಿಎಸಿ-1/2022-23, ದಿನಾಂಕ: 10-01-2023**

ಮೇಲ್ಕಂಡ ವಿಷಯ ಹಾಗು ಪ್ರಸ್ತಾವನೆಗೊಳಪಟ್ಟಂತೆ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯುಕ್ತ ಅಧ್ಯಯನ ಮಂಡಳಿಯ ಸಭೆಯನ್ನು ದಿನಾಂಕ: 05-01-2023 ರಂದು ನಡೆಸಿದ್ದು, ಘಟನೋತ್ತರ ಮಂಜೂರಾತಿ ನೀಡಲಾಗಿದೆ. ಅಧ್ಯಯನ ಮಂಡಳಿ ಸಭೆಯ ನಡಾವಳಿಯನ್ನು ಡೀನ್ (ಶೈಕ್ಷಣಿಕ) ರವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಈ ವೆಚ್ಚವನ್ನು 2022-23 ಸಾಮಾನ್ಯ ನಿಧಿ 069-213 ರಿಂದ ಭರಿಸಬಹುದಾಗಿದೆ.

ಆದೇಶದ ಮೇರೆಗೆ,

10-01-23

ಡೀನ್ (ಶೈಕ್ಷಣಿಕ)

ಗೆ,

**ಅಧ್ಯಕ್ಷರು,** ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು

ಪ್ರತಿ :

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಕಚೇರಿ ಪ್ರತಿ.